

# ಲಿಟರೇಚರ್ 2.0!

'ಕಂಪ್ಯೂಟರ್ ಕವಿ'ಯೊಂದು ನಮ್ಮ ಸಮಕಾಲೀನ ಕವಿಗಳೊಂದಿಗೆ ಪೈಪೋಟಿಗಿಳಿಯುವ ದಿನಗಳು ದೂರವಿಲ್ಲ. ಇದೇ 'ವಿಜ್ಞಾನ ದಿನ'ದ ವಿಶೇಷಕ್ಕಾಗಿ ಕಂಪ್ಯೂಟರ್ ರಚಿತ ಪ್ರಬಂಧ ಸ್ಪರ್ಧೆಯನ್ನು 'ಸುಧಾ' ಏರ್ಪಡಿಸಬಹುದು.

■ **ಕರ್ಕಿ ಕೃಷ್ಣಮೂರ್ತಿ**



ವಿಜ್ಞಾನ ಹಾಗೂ ಸಾಹಿತ್ಯ ಒಂದಕ್ಕೊಂದು ಸಂಬಂಧವಿಲ್ಲದವು ಹಾಗೂ ಅವೆರಡೂ ಮನುಷ್ಯನ ಬೇರೆ ಬೇರೆ ಮನಃಸ್ಥಿತಿಯಲ್ಲಿ ಜರುಗುವ ಪ್ರಕ್ರಿಯೆಗಳು ಎಂಬುದನ್ನು ಸುಲಭದಲ್ಲಿ ಒಪ್ಪಿಕೊಳ್ಳುವುದು ನಮಗೆ ಸಾಧ್ಯವಾಗಬಹುದು. ಹಾಗೇ, ಇವು ಯಾವುದೋ ಒಂದು ಸ್ತರದಲ್ಲಿ ಒಂದಕ್ಕೊಂದು ಕನೆಕ್ಟ್ ಆಗುವಂಥವೇ ಎನ್ನುವ ವಾದವೂ ಸಿಗಬಹುದು. ವಿಜ್ಞಾನ ತನ್ನ ಅಭಿವ್ಯಕ್ತಿಗಾಗಿ ಸಾಹಿತ್ಯವನ್ನು ನೆಚ್ಚಿಕೊಂಡಿದ್ದು ಹಾಗೇ, ಸಾಹಿತ್ಯದ ಅದೆಷ್ಟೋ ಕಲ್ಪನೆಗಳು ವೈಜ್ಞಾನಿಕ ಸಂಶೋಧನೆಗಳಿಗೆ ನಾಂದಿಯಾದ ಉದಾಹರಣೆಗಳೂ ದೊರಕಬಹುದು. ಆದರೆ ಇವೆಲ್ಲವುಗಳನ್ನು ಬದಿಗಿರಿಸಿ, ನನಗೆ ಕುತೂಹಲವಿರುವುದು; ವಿಜ್ಞಾನದ ಉತ್ಪನ್ನವಾದ ಯಂತ್ರಗಳು ಸಾಹಿತ್ಯವನ್ನು ರಚಿಸತೊಡಗಿದಾಗಿನ ಆಗುಹೋಗುಗಳ ಬಗ್ಗೆ. ಇವತ್ತು ವೈಜ್ಞಾನಿಕ ಸಂಶೋಧನೆಗಳಲ್ಲಿ ಹೆಚ್ಚಿನವು ಮನುಷ್ಯನ ಬುದ್ಧಿ, ಭಾವನೆ, ವರ್ತನೆಗಳನ್ನೇ ಕೇಂದ್ರವಾಗಿಸಿಕೊಂಡು ನಡೆಯುತ್ತಿರುವುದು ನಮಗೆಲ್ಲಾ ಗೊತ್ತು. 'ಮಷಿನ್ ಲಾಂಗ್ವೇಜ್'ನ್ನು ಮನುಷ್ಯ ಕಲಿಯುವ ದಿನಗಳೊಂದಿತ್ತು, ಈಗ ಮನುಷ್ಯನ ಲಾಂಗ್ವೇಜನ್ನು ಮಷಿನ್ನುಗಳು ಕಲಿಯುವ ಕಾಲ. ಹೀಗಾಗಿ 'ಕಂಪ್ಯೂಟರ್ ಕವಿ'ಯೊಂದು ನಮ್ಮ ಸಮಕಾಲೀನ ಕವಿಗಳೊಂದಿಗೆ ಪೈಪೋಟಿಗಿಳಿಯುವ ದಿನಗಳು ದೂರವಿಲ್ಲ.

ಯಂತ್ರಗಳು ಸಾಹಿತ್ಯವನ್ನು ರಚಿಸಬಲ್ಲವು ನಿಜ. ಆದರೆ ಅವು ಭಾವನೆಗಳನ್ನು, ರೂಪಕಗಳನ್ನು ಸೃಜಿಸಬಲ್ಲವೇ? ಬರೆಯದ್ದನ್ನು ಓದುಗನಿಗೆ ಕಾಣಿಸುವ ಜಾಣ್ಮೆ ಅವುಗಳಿಗೆ ಒಲಿದೀತೇ? ಯಾರನ್ನಾದರೂ 'ಹಾಗೇ ಸುಮ್ಮನೇ' ಕೊಲ್ಲುವುದು ಯಂತ್ರಗಳಿಗೆ ಸಾಧ್ಯವಾದೀತೇ ಎನ್ನುವ ಸಂಶಯ ಇಟ್ಟುಕೊಳ್ಳುವುದು ಬೇಡ. ಏಕೆಂದರೆ ಇವೆಲ್ಲ ಈಗಾಗಲೇ ಪ್ರಯೋಗಗೊಂಡು, ಕೆಲಮಟ್ಟಿನ ಯಶಸ್ಸನ್ನೂ ಸಾಧಿಸಿಯಾಗಿವೆ. ಮುಂದೊಮ್ಮೆ, ಇದೇ ವಿಜ್ಞಾನ ದಿನದ ವಿಶೇಷಕ್ಕಾಗಿ ಕಂಪ್ಯೂಟರ್ ರಚಿತ ಪ್ರಬಂಧ ಸ್ಪರ್ಧೆಯನ್ನು 'ಸುಧಾ' ಏರ್ಪಡಿಸಬಹುದು. ಮನುಷ್ಯ ಬರೆದ ಕಥೆಗಳಿಗೆ ಯಂತ್ರಮಾನವನೊಬ್ಬ ನಿರ್ಣಾಯಕನಾಗಬಹುದು.

ಆದಾಗ್ಯೂ, ನನ್ನ ಪ್ರಶ್ನೆಗಳಿಗೇನೂ ಬರವಿಲ್ಲ. ಯಂತ್ರಗಳು ಮನುಷ್ಯನಿಗಿಂತಲೂ ಶ್ರೇಷ್ಠ ಸಾಹಿತ್ಯ ಸೃಷ್ಟಿಸಲು ಸಾಧ್ಯವೇ? ಕೃತಿಯೊಂದು ಮನುಷ್ಯನಿಂದ ರಚಿಸಲಾದುದೋ ಅಥವಾ ಮಷಿನ್ನಿನಿಂದಲೋ ಎಂಬುದನ್ನು ಓದುಗ ಗುರುತಿಸಬಲ್ಲನೇ? ಅಥವಾ ಅದಕ್ಕೂ ನಾವು ಯಂತ್ರವನ್ನೇ ಅವಲಂಬಿಸಬೇಕಾದೀತೇ? ಇಷ್ಟಕ್ಕೂ ಓದುಗನಿಗೆ ಕೃತಿಯೊಂದರ ಗುಣಮಟ್ಟ ಮುಖ್ಯವಾಗುತ್ತದೆಯೇ ಅಥವಾ ಅದರ ಲೇಖಕನೇ? ಪುಸ್ತಕ ಪ್ರಕಾಶಕರು ವ್ಯಕ್ತಿಗಳನ್ನು ಕಡೆಗಣಿಸಿ ಯಂತ್ರಗಳತ್ತ ಮುಖಮಾಡಬಹುದೇ? ಇವತ್ತು ಯಂತ್ರಗಳು ಕಾರ್ಮಿಕರ ಉದ್ಯೋಗವನ್ನು ಕಿತ್ತುಕೊಂಡಿರುವುದು ನಮ್ಮ ಕಣ್ಮುಂದೆಯೇ ಇದೆ. ವೈದ್ಯ, ಶಿಕ್ಷಕ, ಚಾಲಕ ಹೀಗೇ ಹಲವು ವೃತ್ತಿಗಳನ್ನು ಯಂತ್ರಗಳು ಅತಿಕ್ರಮಿಸಬಹುದಾದದ್ದು ನಮ್ಮ ಊಹೆಗೆ ನಿಲುಕುವಂಥದ್ದೇ ಆಗಿದೆ. ಹೀಗಿರುವಾಗ, ಇಂತಹುದೇ ವಿಜ್ಞಾನದ ಸಂಶೋಧನೆಗಳು ನಾಳೆ ಸಾಹಿತಿಗಳ ಇರುವನ್ನು ಅನವಶ್ಯಕವಾಗಿಸಬಹುದೇ? ಅಥವಾ ಯಂತ್ರಗಳಿಗಿಂತ ಉತ್ತಮವಾದುದನ್ನು ರಚಿಸಬಲ್ಲ ಸಾಹಿತಿ ಮಾತ್ರ ಹೋರಾಡಿ ಉಳಿಯಬಲ್ಲನೇ?

ಈ ಕೆಳಗಿನ ಸಾಲುಗಳನ್ನು ಗಮನಿಸಿ. ಇದು ಯಂತ್ರ ರಚಿತವೋ ಅಥವಾ ಮನುಷ್ಯ ಬರೆದದ್ದೋ ಎಂಬುದನ್ನು ಊಹಿಸಿ.

**Surrounded by a pretty little sergeant,**
**Another morning at an early crawl.**
**And from the other side of my apartment,**
**An empty room behind the inner wall.**
**A thousand pictures on the kitchen floor,**
**Talked about a hundred years or more.**

(ಕೃಪೆ: 'ಅಬ್ಸರ್ವರ್' ಪತ್ರಿಕೆ)

ಇಲ್ಲಿ, 'ಅಪಾರ್ಟ್‌ಮೆಂಟಿನ ಒಳಗೋಡೆಯ ಹಿಂದೊಂದು ಖಾಲಿ ಕೋಣೆ' ಎನ್ನುವ ಸಾಲೊಂದು ಯಂತ್ರಕ್ಕೆ ಹೊಳೆಯಲು ಸಾಧ್ಯವೇ? ಹೌದೆಂದಾದರೆ ಯಾವ ಅರ್ಥದಲ್ಲಿ ಆ ಸಾಲನ್ನು ಹೇಳಿರಬಹುದು ಅದು?

ಹೋಗಲಿ ಬಿಡಿ. ಈ ಯಂತ್ರಸಾಹಿತ್ಯದ ಪ್ರಯೋಗಗಳೆಲ್ಲಾ ಮೊದಲು ಇಂಗ್ಲಿಷು, ಸ್ಪ್ಯಾನಿಷು ಇತ್ಯಾದಿ ಭಾಷೆಗಳಲ್ಲಿ ಪರಿಣಿತಗಳನ್ನು ಕಂಡಾದಮೇಲಲ್ಲವೇ ಕನ್ನಡಕ್ಕೆ ಬರುವುದು? ಅಷ್ಟರಲ್ಲಿ ಕನ್ನಡವು ಸಾಹಿತ್ಯದ ಅನಿವಾರ್ಯ ಭಾಷೆಯಾಗಿ ಉಳಿದಿದ್ದರೆ ತಾನೆ, ಎಂದು ಸಮಾಧಾನ(?) ಪಡೋಣವೇ?

■